**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.**

**ಕ್ರಿಮಿನಲ್ ಮಿಸ್ ನಂಃ 405/2021** **ದಿನಾಂಕಃ 25-02-2025**

**ಪಿ.ಡಬ್ಲ್ಯೂಃ1**

---

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಈ.ಪಿ ವಕೀಲರಿಂದ**

1. ನನ್ನ ಮತ್ತು ಎದುರುದಾರರ ಮದುವೆ ಹಾಲುರಾಮೇಶ್ವರ ಕ್ಷೇತ್ರದಲ್ಲಿ ನೆರವೇರಿರುತ್ತದೆ. ಎದುರುದಾರರ ನನ್ನ ಸೋದರ ಮಾವ. ನಾವು ಇಷ್ಟಪಟ್ಟು ವಿವಾಹವಾಗಿರುತ್ತೇವೆ ಎಂದರೆ ಸರಿಯಲ್ಲ. ವಿವಾಹದ ನಂತರ ನಾನು ಎದುರುದಾರರ ಮನೆಯಲ್ಲಿ ವಾಸ ಇದ್ದೆನು. ಎದುರುದಾರರ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಈಗ ವಾಸಿಸುತ್ತಿರುವ ಮನೆ ಎದುರುದಾರರಿಗೆ ಸೇರಿದ್ದು ಎಂದರೆ ಸರಿಯಲ್ಲ. ಯೋಗೇಶ್ವರ್ ಮತ್ತು ನರಸಿಂಹಪ್ಪ ನನ್ನ ಮೈದುನ ಆಗಬೇಕು, ಈರನಾಗಪ್ಪ ನನ್ನ ಮಾವ, ವಿಜಿಯಪ್ಪ ನನ್ನ ನಾದಿನಿ ಗಂಡ ಆಗಬೇಕು ಇವರುಗಳು ಜಗಳ ಆಗುವಂತೆ ಚಾಡಿ ಹೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಸಹ ನಮ್ಮ ಗ್ರಾಮದ ವಾಸಿಗಳು. ಸದರಿ ಮೇಲೆ ಹೇಳಿದ ವ್ಯಕ್ತಿಗಳು ನನ್ನ ರಕ್ತಸಂಬಂಧಿಗಳು. ಎದುರುದಾರರು ನನಗಿಂತ 18 ವರ್ಷ ಹಿರಿಯರಾಗಿರುವ ಕಾರಣ ನಾನೇ ಅವರಿಗೆ ಹಿಂಸೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ನನ್ನಿಂದ ಎದುರುದಾರರು 35 ಸಾವಿರ ರೂಪಾಯಿ ಪಡೆದು ವಾಪಸ್ಸು ನೀಡಿರುವುದಿಲ್ಲ ಎಂದು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ಹಣ ನೀಡಿರುವುದಿಲ್ಲ ಎಂದು ಎದುರುದಾರರನ್ನು ನಾನು ದ್ವೇಷಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಬಂಗಾರದ ಒಡವೆಗಳನ್ನು ಎದುರುದಾರರು ಬಲವಂತವಾಗಿ ನನ್ನಿಂದ ಪಡೆದಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ನಾದಿನಿ

ಗಂಡ ಒಡವೆಯನ್ನು ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ 35 ಸಾವಿರ ರೂಪಾಯಿಗಳಿಗೂ ನನ್ನ ಗಂಡನಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿ.

3. ದಿಃ 02-06-2021 ರಂದು ಎದುರುದಾರರು ಗಲಾಟೆ ಮಾಡಿ ನನಗೆ ಹಿಂಸೆ ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರರು ಅವರ ಮನೆಯಿಂದ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಹೊರಹಾಕಿರುತ್ತಾರೆ. ನಾನು ಈಗ ನನ್ನ ತವರು ಮನೆಯಲ್ಲಿ ಇರುತ್ತೇನೆ. ಈಗ ನಾನು ವಾಸ ಇರುವ ಮನೆ ನನ್ನ ತಾಯಿ ಮತ್ತು ಎದುರುದಾರರಿಗೆ ಸೇರಿದ್ದು ಎಂದರೆ ಸರಿಯಲ್ಲ. 3 ವರ್ಷಗಳಿಂದ ನಾನು ಬೇರೆ ಮನೆ ಮಾಡಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮಾಡದಕೆರೆಯಲ್ಲಿ ಒಂದು ಪೆಟ್ರೋಲ್ ಬಂಕ್ ಇರುತ್ತದೆ. ನಾನು ಸದರಿ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪೆಟ್ರೋಲ್ ಬಂಕ್‌ನಲ್ಲಿ ಎಂದಿಗೂ ಕೆಲಸ ಮಾಡಿರುವುದಿಲ್ಲ. ಸದರಿ ಪೆಟ್ರೋಲ್ ಬಂಕ್‌ನಲ್ಲಿ ನನಗೆ ತಿಂಗಳಿಗೆ ರೂ.8,000/- ಸಂಬಳ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಕೂಲಿ ಮಾಡಿ ದುಡಿಯುತ್ತಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ.

4. ಎದುರುದಾರರಿಗೆ ಯಾವುದೇ ಜಮೀನು ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ 3 ಎಕರೆ ಜಮೀನು ಮತ್ತು ಆದಾಯ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ದಾಖಲೆಗಳನ್ನು ಹಾಜರು ಮಾಡುತ್ತೇನೆ. ಎದುರುದಾರರು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಿಕೊಂಡು ಉತ್ತಮ ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ವಯಸ್ಸಾದ ತಾಯ ಇದ್ದು ಅವರನ್ನು ನೋಡಿಕೊಳ್ಳುವ ಜವಬ್ದಾರಿಯಿಂದ ತಪ್ಪಿಸಿಕೊಳ್ಳು ತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಮತ್ತು ಎದುರುದಾರರ ಗಲಾಟೆಗೆ ಸಂಬಂಧಿಸಿದಂತೆ ಗ್ರಾಮದಲ್ಲಿ 3 ಬಾರಿ ಮುಖ್ಯಸ್ಥರ ಸಮಕ್ಷಮ ಪಂಚಾಯಿತಿ ನಡೆದಿತ್ತು ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ

ಗ್ರಾಮಸ್ಥರು, ಸಂಬಂಧಿಕರು ಮತ್ತು ಊರಿನ ಹಿರಿಯರು ಸಹ ಇದ್ದರು. ಎದುರುದಾರರು ನನಗಿಂತ 18 ವರ್ಷ ಹಿರಿಯರಾಗಿದ್ದು ಅವರ ಜೊತೆ ಸಂಸಾರ ಮಾಡಲು ಆಗುವುದಿಲ್ಲ ಮತ್ತು ನನ್ನ ಸ್ವಂತ ಜೀವನ ನಿರ್ವಹಣೆ ಮಾಡಿಕೊಳ್ಳುತ್ತೇನೆ ಎಂದು ಪಂಚಾಯಿತಿಯಲ್ಲಿ ನಾನೇ ಎದುರುದಾರರನ್ನು ತಿರಸ್ಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಿಂದಿನ ವರ್ಷದ ಗೌರಿ ಹಬ್ಬದಂದು ನಾನು ಎದುರುದಾರರ ಮನೆಯಲ್ಲಿ ಪೂಜೆಗೆ ಹಾಜರಾಗಿ ಕಾಣಿಕೆ ಸಲ್ಲಿಸಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಂಜೆಯವರೆಗೂ ಹಬ್ಬದಲ್ಲಿ ಭಾಗಿಯಾಗಿ ಸಂಜೆ ಯಾರಿಗೂ ತಿಳಿಸದೇ ಹೊರಟುಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಯಾವುದೇ ರೀತಿಯ ಕಿರುಕುಳ ನೀಡದಿದ್ದರೂ ನಾನೇ ಸ್ವಂತ ದುಡಿಮೆ ಮಾಡಿಕೊಂಡು ಐಷಾರಾಮಿ ಜೀವನ ನಡೆಸುವ ಸಲುವಾಗಿ ಎದುರುದಾರರನ್ನು ತಿರಸ್ಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

6. ಎದುರುದಾರರು ಇಂದಿಗೂ ನನ್ನನ್ನು ಕರೆದುಕೊಂಡು ಹೋಗಲು ತಯಾರಿದ್ದು ನಾನೇ ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಂಬಂಧಿಕರ ಮಾತನ್ನು ಕೇಳಿಕೊಂಡು ಎದುರುದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಿಕೊಂಡು ಆದಾಯ ಹೊಂದಿದ್ದು ನಾನೇ ಎದುರುದಾರರನ್ನು ಸಾಕಿ ಸಲಹುವ ಬಾದ್ಯತೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಆದಾಯ ಮೂಲ ಇಲ್ಲದಿದ್ದರೂ ಇರುತ್ತದೆ ಎಂದು ಸುಳ್ಳು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ.)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**

**Crl.Mis No. 260/2024**

Case called out.

Petitioner present. She got herself examined as PW-1 and filed affidavit in lieu of her examination in-chief Ex.P-1 to Ex.P-4 marked.

For further chief examination of PW-1.

**Call on 19-03-2025**

**Prl. Civil Judge and JMFC,**
**Hosadurga**

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

ಕ್ರಿಮಿನಲ್ ಮಿಸ್ ನಂಃ **260/2024**  ದಿನಾಂಕಃ **15-02-2025**

ಪಿ.ಡಬ್ಲ್ಯೂಃ**1**

ನಿಶಾನೆಯಾಗಿ ಗುರುತಿಸಲಾದ ದಾಖಲೆಗಳು

| | | |
|---|---|---|
| ನಿಪಿ | **1** | ವಿವಾಹ ಆಮಂತ್ರಣ ಪತ್ರಿಕೆ |
| ನಿಪಿ | **2** | ಅಪರಾಧ ಸಂಖ್ಯೆಃ 265/2022 ರಲ್ಲಿನ ಪ್ರಥಮ ವರ್ತಮಾನ ವರದಿ ಮತ್ತು ಲಗತ್ತಾದ ದೂರು |
| ನಿಪಿ | **3** ಮತ್ತು **4** | ಫೋಟೋಗಳು |

s

(ಪ್ರಸನ್ನ ಕುಮಾರ್ ಸಿ.)
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.